**ಎಂವಿಸಿಃ 1352/2024 ಪಿಡಬ್ಲ್ಯುಃ 1 ಶ್ರೀನಿವಾಸ**

**ಸಾಕ್ಷಿಯನ್ನು ದಿಃ 20.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನನಗೆ ಅಪಘಾತ ಪಡಿಸಿದ ಬೈಕ್ ನಲ್ಲಿ ಮೂವರು ಇದ್ದರು ಎಂದರೆ ಸರಿ. ಅವರು ವೀಲಿಂಗ್ ಮಾಡಿಕೊಂಡು ಅಪಘಾತ ಪಡಿಸಿದ್ದರು ಎಂದರೆ ಸರಿ. ಅಪಘಾತ ಪಡಿಸಿದವರು ಯಾರು ಎಂದು ನನಗೆ ಗೊತ್ತಿಲ್ಲ. ಅದೇ ದಿನ ಅಪಘಾತ ಪಡಿಸಿದ ಹುಡುಗರೊಂದಿಗೆ ಪೋಲಿಸ್ ಠಾಣೆಗೆ ಹೋಗಿದ್ದೇವು ಎಂದರೆ ಸರಿ. ನನ್ನೊಂದಿಗೆ ಬಂದ ವ್ಯಕ್ತಿಯೇ ಆನಂತರ ಬೇರೆ ವ್ಯಕ್ತಿಯನ್ನು ಅಪಘಾತ ಪಡಿಸಿದ ವ್ಯಕ್ತಿಯೆಂದು ಸೇರಿಸಿದ್ದಾರೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ಅಪಘಾತ ಪಡಿಸಿದ ವಾಹನ ಸಂಖ್ಯೆ ಕೆಎ-09-0944 ಆಗಿದೆ. ಈ ನಂಬರ್ ಅನ್ನು ನನ್ನ ತಮ್ಮನ ಮಗ ಹೇಳಿದ್ದಾನೆ. ಆತನ ಹೆಸರು ಜಗದೀಶ್. ಅಪಘಾತದ ದಿನ

ಬೈಕ್ ನ ನಂಬರ್ ಪ್ಲೇಟ್ ಇರಲಿಲ್ಲ ಎಂದರೆ ನಾನು ಬಿದ್ದುಹೋದ ಕಾರಣ ನಾನು ನೋಡಿಲ್ಲ ಎನ್ನುತ್ತಾರೆ. ಅಪಘಾತ ಆದ ಒಂದು ಗಂಟೆಯಲ್ಲಿ ಜಗದೀಶ್ ಸ್ಥಳಕ್ಕೆ ಬಂದಿದ್ದಾರೆ. ಜಗದೀಶ್ ರವರು ವಾಹನವನ್ನು ಆಸ್ಪತ್ರೆ ಬಳಿ ನೋಡಿದ್ದಾರೆ. ಅಪಘಾತ ಆದ ಮೂರು ದಿನದ ನಂತರ ದೂರು ನೀಡಿದ್ದಾರೆ. ಆ ಮೂರು ದಿನದಲ್ಲಿ ಎದುರುದಾರರ ವಾಹನವನ್ನು ಈ ಅರ್ಜಿಗೋಸ್ಕರ ಸೇರಿಸಿದ್ದಾರೆ ಎಂದರೆ ಸರಿಯಲ್ಲ. ಅಪಘಾತದ ಸಂದರ್ಬದಲ್ಲಿ ಸದರಿ ವಾಹನಕ್ಕೆ ನಂಬರ್ ಪ್ಲೇಟ್ ಇರಲಿಲ್ಲ ಎಂದರೆ ಸರಿಯಲ್ಲ. ಆದ ಕಾರಣ 1 ನೇ ಎದುರುದಾರರು, ನನ್ನ ಮಗ, ಪೋಲೀಸರು ಸೇರಿ ಎದುರುದಾರರ ವಾಹನವನ್ನು ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದವನ ಹೆಸರು ನನಗೆ ಈಗಲೂ ಗೊತ್ತಿಲ್ಲ. ದೂರುದಾರ ವೆಂಕಟೇಶ್ ನನ್ನ ತಮ್ಮ. ಮತ್ತೊಬ್ಬ ಜಗದೀಶ್ ನನಗೆ ಪರಿಚಿತರಲ್ಲ. ರಾಜು, ಮಧು ಯಾರು ನನಗೆ ಪರಿಚಿತರಲ್ಲ. ಅಪಘಾತ ಸ್ಥಳವನ್ನು ನನ್ನ ಮಗ ಜಗದೀಶ್ ತೋರಿಸಿದ್ದಾನೆ. ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಅಪಘಾತದ ದಿನ ಕೊಟ್ಟಿದ್ದೇನೆ. ಅಪಘಾತ ಪಡಿಸಿದವರ ಮಾಹಿತಿ ಅಪಘಾತದ ದಿನ ಗೊತ್ತಿರಲಿಲ್ಲ. ಪೋಲೀಸರಿಗೆ ಅಪಘಾತ ಪಡಿಸಿರುತ್ತಾರೆಂದು ಅಷ್ಟೇ ಹೇಳಿದ್ದರು.

2. ಅಪಘಾತ ಆದ ನಂತರ ಕರುಣಾಕರ ಆಸ್ಪತ್ರೆಗೆ ಹೋಗಿದ್ದು ಅಪಘಾತದ ಬಗ್ಗೆ ಹೇಳಿ ಬರೆಯಿಸಿರುತ್ತೇನೆ. ಅಪಘಾತ ಪಡಿಸಿದವರು ಮುಖಾಮುಖಿ ಡಿಕ್ಕಿ ಮಾಡಿದ್ದಾರೆ. ಅಪಘಾತ ಸ್ಥಳ ನಾಲ್ಕು ರಸ್ತೆಗಳು ಕೂಡವ ಸ್ಥಳ ಎಂದರೆ ಸರಿ. ನಿಪಿ. 4 ಪ್ರಕಾರ ಅಪಘಾತ ರಸ್ತೆ ಮಧ್ಯದಲ್ಲಿ ಆಗಿದೆ ಎಂದರೆ ಸರಿಯಲ್ಲ. ನನಗೆ ಬೇರೆ ಯಾವುದೋ ವಾಹನ ಅಪಘಾತ ಮಾಡಿದ್ದು ಅಪಘಾತದಲ್ಲಿ ನನ್ನ ನಿರ್ಲಕ್ಷ್ಯತನವೂ ಇತ್ತು ಪರಿಹಾರಕ್ಕಾಗಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 9 ರಲ್ಲಿ ನನ್ನ ವಯಸ್ಸು ಸರಿ ಇದೆ. ನಾನು ವೈರಿಂಗ್ ಕೆಲಸ ಮಾಡುತ್ತೇನೆ. ಈಗ ನಾನು ಕೆಲಸ ಮಾಡುತ್ತಿಲ್ಲ. ಮೆಟ್ಟಿಲು ಹತ್ತಬಾರದು ಎಂದು ವೈಧ್ಯರು ಹೇಳಿದ್ದಾರೆ. ನನ್ನ ಬಲಕಾಲಿಗೆ ಪೆಟ್ಟಾಗಿದೆ. ಗಾಯಗಳು ಒಣಗಿದೆ, ನೋವಿದೆ ಎನ್ನುತ್ತಾರೆ. ದಿನನಿತ್ಯದ ಕೆಲಸ ಮಾಡಲು ಆಗುವುದಿಲ್ಲ. ನಾನು ಮೊದಲಿನಂತೆ ಕೆಲಸ ಮಾಡುತ್ತಿದ್ದು ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ವಾಹನ ಅಪಘಾತದಲ್ಲಿ ಭಾಗಿಯಾಗದ ಕಾರಣ ನಾವು ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಪ್ರಕರಣವನ್ನು ಸೃಷ್ಟಿಸಿದ್ದು ಆ ಕಾರಣಕ್ಕೆ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.